**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಒ.ಎಸ್.4/2014**

**ಪಿಡಬ್ಲ್ಯೂ1**

**ದಿನಾಂಕ 11-12-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಶ್ರೀ. ವಕೀಲರಿಂದ 6 ನೇ ಪ್ರತಿವಾದಿ ಪರ ವಕೀಲರುಃ**

ನನ್ನ ತಾತನ ಹೆಸರು ದೊಡ್ಡ ಹುಚ್ಚೇಗೌಡರು. ನನ್ನ ತಾತನಿಗೆ 6 ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ತಂದೆ ಹಾಗೂ ಅವರ ಅಣ್ಣ ತಮ್ಮಂದಿರು 1974 ರಲ್ಲಿ ನನ್ನ ತಾತನಿಗೆ ಸೇರಿದ ಆಸ್ತಿಗಳ ವಿಭಾಗವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಇವರು 1979 ರಲ್ಲಿ ಕಾಲ ಆದರು ಎಂದರೆ ಸರಿ. ನನ್ನ ತಂದೆಯ ಕಾಲದ ನಂತರ ದಾವಾ ಆಸ್ತಿಗಳು ಪ್ರತಿವಾದಿ 1 ರಿಂದ 3 ರವರ ಹೆಸರಿಗೆ ಖಾತೆಯಾಗಿರುತ್ತವೆ ಎಂದರೆ ಸರಿ.

6 ನೇ ಪ್ರತಿವಾದಿ ಇವರು ದಾವಾ ಸಿ ಐಟಂ ನ್ನು ದಿಃ10.03.1999 ರಲ್ಲಿ ಪ್ರತಿವಾದಿ 1 ರಿಂದ 3 ಇವರಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಅದೇ ರೀತಿ ದಿಃ14.02.2001 ರಂದು 6 ನೇ ಪ್ರತಿವಾದಿ ಇವರು ಡಿ ಐಟಂ ಸ್ವತ್ತನ್ನು 1 ರಿಂದ 3 ನೇ ಪ್ರತಿವಾದಿ ಇವರಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಸದರಿ ದಾವಾ ಆಸ್ತಿಗಳನ್ನು 1 ರಿಂದ 3 ನೇ ಪ್ರತಿವಾದಿ ಇವರು ಡೋರನಹಳ್ಳಿ ಕಾವೇರಿ ಗ್ರಾಮೀಣಾ ಬ್ಯಾಂಕ್ನಲ್ಲಿ ತಾವು ಮಾಡಿದ ಸಾಲಾವನ್ನು ತೀರಿಸಲು ಮಾರಿರುತ್ತಾರೆ ಎಂದರೆ ಸರಿಯಲ್ಲ.

6 ನೇ ಪ್ರತಿವಾದಿ ಇವರ ಹೆಸರಿಗೆ ಖಾತೆಗಳು ಕ್ರಯಪತ್ರದ ಅನುಸಾರ ಆಗಿರುತ್ತವೆ ಎಂದರೆ ಸರಿ. 6 ನೇ ಪ್ರತಿವಾದಿ ಇವರು ಸದರಿ ಆಸ್ತಿಗಳನ್ನು ಖರೀದಿಸಿದ ನಂತರ ವ್ಯವಸಾಯ ಕಾಮಗಾರಿಯನ್ನು ಮಾಡುತ್ತಾ ಸ್ವಾದೀನಾನುಬವದಲ್ಲಿ ಇದ್ದಾರೆ ಎಂದರೆ ಸಾಕ್ಷಿ ವ್ಯವಸಾಯ ಮಾಡುತ್ತಿದ್ದಾರೆ ಆದರೆ ಕ್ರಯಕ್ಕೆ ಪಡೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

1 ರಿಂದ 3 ನೇ ಪ್ರತಿವಾದಿ ಇವರ ಸರ್ವೇ ನಂ.138/1 ರಲ್ಲಿ 23 ಗುಂಟೆಯನ್ನು ಸಣ್ಣ ನಿಂಗಮ್ಮ ಇವರಿಗೆ ದಿಃ05.02.1981 ರಲ್ಲಿ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಈ ಆಸ್ತಿಯನ್ನು ಸದರಿ ದಾವೆಯಲ್ಲಿ ದಾವಾ ಆಸ್ತಿಯಾಗಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೇ ನಂ.83/3 ರಲ್ಲಿ 1 ಎಕರೆ 11 ಗುಂಟೆ ಹಾಗೂ ಸರ್ವೇ ನಂ.88/4 ರಲ್ಲಿ 1 ಗುಂಟೆ ಜಮೀನನ್ನು ಬಿ ಆರ್ ಚಂದ್ರೇಗೌಡ ಇವರಿಗೆ 1 ರಿಂದ 3 ನೇ ಪ್ರತಿವಾದಿ ಇವರು 1981 ನೇ ಇಸವಿಯಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಗಳನ್ನು ನಾನು ದಾವೆಯಲ್ಲಿ ದಾವಾ ಆಸ್ತಿಯಾಗಿ ಸೇರಿಸಿರುವುದಿಲ್ಲ ಎಂದರೆ ಸರಿ.

ಸರ್ವೇ ನಂ.151/3 ರಲ್ಲಿ 20 ಗುಂಟೆ ಜಮೀನನ್ನು ಬಿ ಆರ್ ಚಂದ್ರೇಗೌಡ ಇವರಿಗೆ 1 ರಿಂದ 3 ನೇ ಪ್ರತಿವಾದಿ ಇವರು 05.02.1981 ನೇ ಇಸವಿಯಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ನಾನು ದಾವೆಯಲ್ಲಿ ದಾವಾ ಆಸ್ತಿಯಾಗಿ ಸೇರಿಸಿರುವುದಿಲ್ಲ ಎಂದರೆ ಸರಿ.

ದಿಃ19.03.2004 ರಂದು 2 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಖಾತಾ ನಂ.107 21 ಇಂಟು 60 ಅಡಿ ಖಾಲಿ ನಿವೇಶನವನ್ನು ಹರೀಶ ಬಿನ್ ಜವರೇಗೌಡ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ

ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ನಾನು ದಾವೆಯಲ್ಲಿ ದಾವಾ ಆಸ್ತಿಯಾಗಿ ಸೇರಿಸಿರುವುದಿಲ್ಲ ಎಂದರೆ ಸರಿ.

ನಾನು 6 ನೇ ಪ್ರತಿವಾದಿ ಇವರು ದಾವಾ ಆಸ್ತಿ ಸಿ ಮತ್ತು ಡಿ ಯನ್ನು ಕಾನೂನು ಬದ್ದವಾಗಿ ಖರೀದಿ ಮಾಡಿದ್ದರೂ ಸಹ ನಾನು ದುರದೇಶದಿಂದ ಅವರ ವಿರುದ್ದ ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ 1 ನೇ ಪ್ರತಿವಾದಿ ಹಾಗೂ 2 ಮತ್ತು 3 ನೇ ಪ್ರತಿವಾದಿ ಇವರು ಬೇರೆ ಬೇರೆ ವ್ಯಕ್ತಿಗಳಿಗೆ ಆಸ್ತಿಗಳನ್ನು ಮಾರಾಟ ಮಾಡಿದ್ದರೂ ಸಹ ಅವುಗಳನ್ನು ದಾವೆಯಲ್ಲಿ ತೋರಿಸದೇ 6 ನೇ ಪ್ರತಿವಾದಿ ಇವರಿಗೆ ಮಾರಾಟ ಮಾಡಿದ ಆಸ್ತಿಗಳನ್ನು ಮಾತ್ರ ಸದರಿ ದಾವೆಯಲ್ಲಿ ತೋರಿಸಿ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

1 ರಿಂದ 3 ನೇ ಪ್ರತಿವಾದಿ ಇವರು ನಮ್ಮ ಕುಟುಂಬದ ಬ್ಯಾಂಕ್ ಸಾಲಗಳನ್ನು ತೀರಿಸುವ ಸಲುವಾಗಿ 6 ನೇ ಪ್ರತಿವಾದಿ ಇವರಿಗೆ ದಾವಾ ಐಟಂ ನಂ. ಸಿ ಮತ್ತು ಡಿ ಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಸಿ ಮತ್ತು ಡಿಯ ಮೇಲೆ ನನಗೆ ಯಾವುದೇ ಕಾನೂನು ಬದ್ಧ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ 6 ನೇ ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿದ್ದು ಮುಂದಿನ ಪಾಟೀ ಸವಾಲು ಇರುವುದಿಲ್ಲ.

ಮರುವಿಚಾರಣೆ ಇರುವುದಿಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ